ನಂತರ ಸಾರ್ವಜನಿಕರಿಂದ ಬರುವ ಆಕ್ಷೇಪಣೆ ಹಾಗೂ ಸಲಹೆಗಳನ್ನು ಗಣನೆಗೆ ತೆಗೆದು ಕೊಂಡು ಆದಷ್ಟು ಬೇಗ ಕನಿಷ್ಟ ವೇತನವನ್ನು ಪುನರ್ವಿಮರ್ಶಿಸಿ ಘೋಷಿಸಲಾಗುವುದು. ಈಗ ೧೯೭೯ರಲ್ಲಿ ನಿಗದಿಗೊಳಿಸಿದ ಕನಿಷ್ಟ ವೇತನವು ಮಾತ್ರ ಚಾರಿಯಲ್ಲಿರುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಮಾನ್ಯ ಅಧ್ಯಕ್ಷರೇ ಕಾರ್ಮಿಕರಿಗೆ ಕನಿಷ್ಟವೇತನವನ್ನು ಕೊಡುವ ಕರಡು ಪುಸ್ತಾವನೆಯನ್ನು ಪ್ರಕಟಿಸಲು ಕ್ರಮ ಕೈಗೊಳ್ಳಲಾಗಿದೆ ಎಂದು ಮಾನ್ಯ ಸಚಿವರು ಹೇಳಿದರು. ಆದರೆ ಈ ಹಿಂದೆ ಈ ೬೦೫೦ ಜನ ಕಾರ್ಮಿಕರಿಗೆ ಕನಿಷ್ಟ ವೇತನವನ್ನು ಒಂದು ತಿಂಗಳಲ್ಲಿ ಮಾಡಿ ಕೊಡುವ ವಿಷಯವನ್ನು ಹೇಳಿದ್ದೀರಿ. ಇನ್ನು ವಿಳಂಬವಾದರೆ ಆ ಕಾರ್ಮಿಕರಿಗೆ ತೊಂದರೆಯಾಗುವುದಿಲ್ಲವೇ?

ಶ್ರೀ ಡಿ. ಮಂಜುನಾಥ್.—ಸ್ವಾಮಿ,ಕನಿಷ್ಟ ವೇತನವನ್ನು ಕೊಡುವ ಬಗ್ಗೆ ಪರಿಶೀಲನೆ ಮಾಡು ತ್ತಿದ್ದೇನೆ. ಇನ್ನು ೩ ದಿವಸದಲ್ಲಿ ನೋಟಿಫಿಕೇಶನ್ ಆಗುತ್ತದೆ. ಸಾರ್ವಜನಿಕರಿಂದ ಏನಾದರೂ ಆಕ್ಷೇಪಣೆಗಳು ಬಂದರೆ ಅವುಗಳ ಬಗ್ಗೆ ತನಿಖೆ ಮಾಡಿ ಕನಿಷ್ಟವೇತನವನ್ನು ಘೋಷಣೆ ಮಾಡುತ್ತೇವೆ.

ಶ್ರೀ ರಾಜವರ್ಧನ್.—ಮಾನ್ಯ ಅಧ್ಯಕ್ಷರೇ ಸದನದ ನಿಯಮಾವಳಿಗಳ ಪ್ರಕಾರ ಸದಸ್ಯರು ಪತ್ರಿಕೆ. ಪುಸ್ತಕಗಳನ್ನು ಓದಬಾರದು ಎಂದು ಇದೆ. ಆದರೆ ಮಾನ್ಯ ಸದಸ್ಯರು ಪತ್ರಿಕೆಯನ್ನು ಓದುತ್ತಿದ್ದಾರೆ,

ಶ್ರೀ ಕೆ.ಹೆಚ್. ಪಾಟೀಲ್.—ಸ್ವಾಮಿ ಈ ದಿವಸ ಸದನದಲ್ಲಿ ಪುಸ್ತಾಪ ಮಾಡಬೇಕೆಂದಿರುವ ವಿಷಯಗಳ ಬಗ್ಗೆ ಪತ್ರಿಕೆಗಳನ್ನು ಮತ್ತು ಪುಸ್ತಕಗಳನ್ನು ರೆಫರ್ ಮಾಡಬಹುದು ಎಂದು ನಿಯಮಗಳಲ್ಲಿ ಇದೆ. ಆದನ್ನು ಕೂಡ ತಾವು ನೋಡಬೇಕು.

ಶ್ರೀ ಬಿ.ಎಂ. ಇದಿನಬ್ಬ.—ಸ್ವಾಮಿ ಸುಮಾರು ೬೦೫೦ ಜನ ಕಾರ್ಮಿಕರು ಪ್ರತಿ ದಿವಸ ಮುಷ್ಕರ ಮಾಡುತ್ತಿದ್ದಾರೆ. ಆದಷ್ಟು ಬೇಗ ತಾವು ಇದನ್ನು ಘೋಷಣೆ ಮಾಡಿ. ಕಾರ್ಮಿಕರಿಗೆ ಇರುವ ತೊಂದರೆಯಲ್ಲಿ ಸ್ವಲ್ಪ ಅನುಕೂಲ ಆಗುತ್ತದೆ, ಅವರಿಗೂ ಸಂತೋಷವಾಗುತ್ತದೆ.

ಶ್ರೀ ಡಿ. ಮಂಜುನಾಥ್.—ಮಾನ್ಯ ಅಧ್ಯಕ್ಷರೇ, ಈಗಾಗಲೇ ಹೇಳಿದ್ದೇನೆ. ಪ್ರಿಲಿಮಿನರಿ ನೋಟಿಫಿಕೇಶನ್‌ನ್ನು ಇನ್ನು ಮೂರು ದಿವಸದಲ್ಲಿ ಇಷ್ಯು ಮಾಡುತ್ತೇವೆ. ಆ ಬಗ್ಗೆ ಸಾರ್ವಜನಿಕರಿಂದ ಏನಾದರೂ ಆಕ್ಷೇಪಣೆಗಳು ಬಂದರೆ ಅವುಗಳನ್ನು ಪರಿಶೀಲನೆ ಮಾಡಿ ಇನ್ನು ಎರಡು ತಿಂಗಳೊಳಗೆ ಫೈನಲ್ ನೋಟಿಫಿಕೇಷನ್ ಇಷ್ಯು ಮಾಡುತ್ತೇವೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಮುಷ್ಕರ ಮಾಡುತ್ತಿದ್ದರು. ನಾನು ಆ ಉದ್ದಿಮೆಯ ಮಾಲೀಕರನ್ನು ಕರೆಯಿಸಿ ಅವರ ಜೊತೆಯಲ್ಲಿ ಮಾತನಾಡಿದ್ದೇನೆ.

ಅಧ್ಯಕ್ಷರು.–ಳಳ(೩೨೨)ನ್ನು ಮಂಂದೂಡಲಾಗಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರೂ ಸಹ ನಗರಾಭಿವೃದ್ಧಿ ಸಚಿವ ರಾಗಿದ್ದವರು ಎಲ್ಲಾ ಪುರಸಭೆಗಳಿಂದ ಮಾಹಿತಿಯನ್ನು ತರಿಸಬೇಕಾಗಿದೆ ನನ್ನಲ್ಲಿ ಈಗ ಪೂರ್ಣ ಮಾಹಿತಿ ಇಲ್ಲ. ಆದ್ದರಿಂದ ನಾನೇ ಇದಕ್ಕೆ ಒಂದು ತಿಂಗಳ ಸಮಯವನ್ನು ಕೇಳಿದ್ದೇನೆ. ಪೂರ್ಣವಾದ ಅಂಕಿ ಅಂಶಗಳು ಬಂದರೆ ಈ ಪ್ರಶ್ನೆಯನ್ನು ಯಾವಾಗ ಬೇಕಾದರೂ ತಾವು ತೆಗೆದುಕೊಳ್ಳಬಹುದು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರಿಂದ ಬಡವರಿಗೆ ಕೊಟ್ಟ ಉಚಿತ ನಿವೇಶನಗಳನ್ನು ಇಬ್ಬರಿಗೆ ಹಂಚಿರುವ ಬಗ್ಗೆ

೩೪೩. **ಶ್ರೀ ಸಿ. ಕಣ್ಣನ್** (ಶಾಂತಿನಗರ).—ಮಾನ್ಯ ಕಾನೂನು ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಬಡವರಿಗೆ ಕೊಟ್ಟ ೨೫ ಉಚಿತ ನಿವೇಶನಗಳನ್ನು ಇಬ್ಬರಿಗೆ ಹಂಚಿರುವುದು ನಿಜವೇ?

೨. ಓಎಂಬಿಆರ್ ಬಡಾವಣೆಯ ೧೩೩ ರಿಂದ ೧೫೬ನೇ ನಂಬರಿನ ಉಚಿತ ನಿವೇಶನಗಳನ್ನು ಮೊದಲು ಪಡೆದಿದ್ದ ಬಡವರ ಸೇವಾ ಸಮಿತಿಯ ೨೫ ಜನ ಸದಸ್ಯರಿಗೆ ಬದಲಿ ನಿವೇಶನ ಗಳನ್ನು ಕೋರಮಂಗಲ ೮ನೇ ಬಡಾವಣೆಯಲ್ಲಿ ಕೊಡಲಾಗಿದೆಯೇ?

೩. ನಿವೇಶನಗಳ ಪೂರ್ಣ ಹಣವನ್ನು ಎರಡನೇ ಹಂಚಿಕೆದಾರರಿಂದ ಪಾವತಿ ಮಾಡಿಸಿಕೊಂಡಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಈ ಎರಡನೇ ಮಂಜೂರುದಾರರಿಗೆ ನಿವೇಶನಗಳ ಸ್ವಾಧೀನವನ್ನು ಕೊಡದಿರುವುದು ನಿಜವೇ? ಹಾಗಿದ್ದಲ್ಲಿ ಯಾವಾಗ ಸ್ವಾಧೀನಕ್ಕೆ ನೀಡಲಾಗುವುದು.

೪. ಉಚಿತ ನಿವೇಶನಗಳನ್ನು ಪಡೆದ ಮೊದಲ ೨೫ ಬಡ ಕುಟುಂಬಗಳಿಗೆ ಬದಲಿ ನಿವೇಶನಗಳನ್ನು ಕೊಡುವಂತೆ ಕೇಳಿರುವ ಬಡವರ ಸೇವಾ ಸಮಿತಿಯವರ ಅರ್ಜಿಗಳು ಪ್ರಾಧಿಕಾರಕ್ಕೆ ತಲುಪಿದೆಯೇ ?

೫. ಹಾಗಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ ಮತ್ತು ನಿವಾಸಿಗಳಿಗೆ ಬದಲಿ ನಿವೇಶನಗಳನ್ನು ಸಮಿತಿಯವರು ಕೇಳಿರುವ ಕೋರಮಂಗಲ ೮ನೇ ಬ್ಲಾಕಿನಲ್ಲಿ ರಿಯಾಯಿತಿ ದರವಾದ ಅರ್ಧ ಬೆಲೆಗೆ ಈ ೨೫ ಕೊಳಚೆ ನಿವಾಸಿಗಳಿಗೆ ಬದಲಿ ನಿವೇಶನಗಳನ್ನು ಯಾವಾಗ ನೀಡಲಾಗಿದೆ, ಹಾಗಿಲ್ಲದಿದ್ದಲ್ಲಿ ಯಾವಾಗ ಕೊಡಲಾಗುವುದು.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು).—

೧. ನಿಜ

೨. ಕೊಟ್ಟಿಲ್ಲ

೩. ಎರಡನೇ ಹಂಚಿಕೆದಾರರಿಗೆ ಹಕ್ಕು ಪತ್ರ ಕೊಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

೪. ತಲುಪಿದೆ

೫. ಕೋರಮಂಗಲ ೮ನೇ ಬ್ಲಾಕಿನ ಬಡಾವಣೆಯಲ್ಲಿ ಖಾಲಿ ನಿವೇಶನಗಳು ಲಭ್ಯವಿಲ್ಲದಿರುವುದರಿಂದ ಬನಶಂಕರಿ ೩ನೇ ಹಂತದಲ್ಲಿ ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಸಿ, ಕಣ್ಣನ್ —ಮಾನ್ಯ ಅಧ್ಯಕ್ಷರೇ ಮಾನ್ಯ ಮಂತ್ರಿಗಳು ಸುಮಾರು ೩ ಸಾರಿ ಕ್ರಮ ತೆಗೆದು ಕೊಳ್ಳುತ್ತೇನೆಂದು ಹೇಳಿದರು. ಆದರೆ ಇದುವರೆವಿಗೂ ಕ್ರಮ ತೆಗೆದುಕೊಂಡಿಲ್ಲ. ಕಡೆಯದಾಗಿ ಈ ಸಾರಿಯಾದರೂ ಕ್ರಮ ತೆಗೆದುಕೊಳ್ಳುತ್ತಾರೆಯೇ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ವಿಷಯ ಬಿ.ಡಿ.ಎ. ಕಮಿಟಿ ಮುಂದೆ ಇದೆ. ಇನ್ನು ಒಂದು ತಿಂಗಳಲ್ಲಿ ಇದು ತೀರ್ಮಾನ ಆಗಬಹುದು.

ಅಲ್ಪಕಾಲಾವಧಿ ಪ್ರಶ್ನೆ

ಜನತಾ ವಸತಿಗಳ ಯೋಜನೆಯ ಬಗ್ಗೆ

೨. **ಶ್ರೀ ಕೆ ಎಚ್. ಶ್ರೀನಿವಾಸ್** (ಶಿವಮೊಗ್ಗ).—ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಮಂತ್ರಿಗಳು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಎ) ೧೯೮೫-೮೬, ೮೬-೮೭ ಹಾಗೂ ೧೯೮೭-೮೮ನೇ ಸಾಲಿನಲ್ಲಿ ಹುಡ್ಕೋ ನೆರವಿನ ಜನತಾ ವಸತಿ ಯೋಜನೆಯಲ್ಲಿ ಮತ್ತು ಕಡಿಮೆ ವೆಚ್ಚದ ವಸತಿ ಯೋಜನೆಗಳಲ್ಲಿ ಎಷ್ಟು ಮನೆಗಳನ್ನು ಮಂಜೂರು ಮಾಡಲಾಗಿದೆ.

ಬಿ) ಸದರಿ ಯೋಜನೆಗೆ ಮಂಜೂರಾದ ಮತ್ತು ಖರ್ಚಾದ ಹಣ.

ಸಿ) ಮೇಲ್ಕಂಡ ಯೋಜನೆಯಲ್ಲಿ ಆಯಾ ವರ್ಷಗಳಲ್ಲಿ ಕಟ್ಟಲ್ಪಟ್ಟ ಮನೆಗಳು